ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಜೇನು ಕುರುಬರ ಕಲ್ಯಾಣ ಅಧಿಕಾರಿಯವರ ಕಛೇರಿ ಮಾತ್ರ ಹುಣಸೂರಿನಲ್ಲಿರುತ್ತದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಶ್ರೀಮತಿ ಸುಮಾ ವಸಂತ ಅವರ ಪರವಾಗಿ).—ಜೇನು ಕುರುಬರು ಹೆಚ್ಚಾಗಿ ಕೊಡಗು ಜಿಲ್ಲೆಯಲ್ಲಿರತಕ್ಕವರು. ಎಲ್ಲಿ ರಿಸರ್ವ್ ಕಾನ್ಸ್‌ಟ್ಯೂಯನ್ಸಿ ಇದೆ ಅಲ್ಲಿ ಅವರ ಪಾಪ್ಯುಲೇಷನ್ ಜಾಸ್ತಿ ಇದೆ ಎಂದು ಅರ್ಥ. ಅವರಿಗೆ ಹುಣಸೂರು ಕಚೇರಿ ದೂರ ವಾಗುತ್ತದೆ. ಆದ್ದರಿಂದ ಅದನ್ನು ವಿರಾಜಪೇಟೆಗೆ ಏತಕ್ಕೆ ಷಿಫ್ಟ್ ಮಾಡಬಾರದು? ಅಥವಾ ಅಲ್ಲೇ ಇನ್ನೊಂದು ಕಚೇರಿಯನ್ನು ಏಕೆ ತೆರೆಯಬಾರದು?

ಶ್ರೀ ಜಿ. ಬಸವಣ್ಣಪ್ಪ.—ಜೇನು ಕುರುಬರು ಏನಿದ್ದಾರೆ ಇವರು ಮೂಲ ನಿವಾಸಿಗಳು, ಅವರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ವಿಶೇಷ ಗಮನಹರಿಸಿದೆ. ಅವರನ್ನು ಬಡತನ ರೇಖೆಯಿಂದ ಮೇಲೆ ಎತ್ತಬೇಕಾದರೆ ಮತ್ತು ಅವರಿಗೆ ಶಿಕ್ಷಣ ಕೊಡಬೇಕಾದರೆ ಪ್ರತ್ಯೇಕ ಕಚೇರಿ ಗಳನ್ನು ತೆರೆದಿದ್ದೇವೆ. ಜೇನು ಕುರುಬರು ಹೆಚ್ಚಾಗಿ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿದ್ದಾರೆ, ಇವೆರಡು ಜಿಲ್ಲೆಗಳ ಮಧ್ಯೆ ಹುಣಸೂರು ಕೇಂದ್ರ ಸ್ಥಳ ಎಂದು ಭಾವಿಸಿ ಅಲ್ಲಿ ಕಚೇರಿಯನ್ನು ತೆರೆದಿದೆವೆ. ಅಲ್ಲಿ ಕೆಲಸ ನಡೆಯುತ್ತಿದೆ.

ಯಾದಗಿರಿ ತಾಲ್ಲೂಕು ಭೂನ್ಯಾಯ ಮಂಡಳಿಯ ಇತ್ಯರ್ಥವಾದ ಪ್ರಕರಣದ ಬಗ್ಗೆ

೨೫೦೭. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :—ಮಾನ್ಯ ಕಂದಾಯ ಯೋಜನಾ ಹಾಗೂ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಾದಗಿರಿ ತಾಲ್ಲೂಕು ಭೂನ್ಯಾಯ ಮಂಡಳಿಯಲ್ಲಿ ಕಳೆದ ಮೂರು ವರ್ಷಗಳಿಂದ ಇತ್ಯರ್ಥ ವಾದ ಪ್ರಕರಣಗಳೆಷ್ಟು ?

ಆ) ಗೇಣಿದಾರರ ಪರವಾಗಿ ಮತ್ತು ವಿರುದ್ಧವಾಗಿ ತೀರ್ಮಾನವಾದ ಪ್ರಕರಣಗಳೆಷ್ಟು ?

ಇ) ಯಾದಗಿರಿ ಭೂನ್ಯಾಯ ಮಂಡಳಿಯು ರೈತ ಸ್ವಾಧೀನಕ್ಕೆ ತೆಗೆದುಕೊಂಡ ಹೆಚ್ಚುವರಿ ಭೂಮಿ ಮತ್ತು ಸರ್ಕಾ ಹೆಚ್ಚುವರಿ ಭೂಮಿಯನ್ನು ಬಡಜನರಿಗೆ ಕಳೆದ ಮೂರು ವರ್ಷಗಳಿಂದ ವಿತರಣೆ ಮಾಡುವುದರ ಬಗ್ಗೆ.

ಈ) ಯಾದಗಿರಿ ತಾಲ್ಲೂಕು ಭೂನ್ಯಾಯ ಮಂಡಳಿಯು ಮಾಡಿರುವ ಕೆಲಸದಿಂದ ಆದ ಅನ್ಯಾಯದ ಬಗ್ಗೆ ಸರ್ಕಾರದ ಗಮನಕ್ಕೆ ದೂರುಗಳೇನಾದರೂ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಭಾರಿ ನೀರಾವರಿ ಸಚಿವರು) :—

ಅ) ಇತ್ಯರ್ಥವಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಕಲಂ ೪೮ ರ ಅಡಿಯಲ್ಲಿ	ಕಲಂ ೪೮ ಎ ಅಡಿಯಲ್ಲಿ	ಕಲಂ ೬೬ ರ ಅಡಿಯಲ್ಲಿ (ಹೆಚ್ಚುವರಿ ಭೂಮಿ)	ಇನಾಂ ಪ್ರಕರಣಗಳು
೧೯೮೫-೮೬	ಇಲ್ಲ	ಇಲ್ಲ	೧೮	೫೪
೧೯೮೬-೮೭	ಇಲ್ಲ	ಇಲ್ಲ	೬೫	೩೪
೧೯೮೭-೮೮	ಇಲ್ಲ	ಇಲ್ಲ	೧೦	೭೫

ಆ) ವಿವರಗಳು ಈ ಕೆಳಕಂಡಂತಿವೆ.

ವರ್ಷ	ಗೇಣಿದಾರರ ಪರವಾಗಿ	ಗೇಣಿದಾರರ ವಿರೋಧವಾಗಿ	ಒಟ್ಟು
೧೯೮೬-೮೭	೬೪	೩೦	೯೪
೧೯೮೭-೮೮	೧೯	೧೫	೩೪
೧೯೮೮-೮೯	೭೦	೫	೭೫
		(ಇನಾಂ ಪ್ರಕರಣಗಳು ಮಾತ್ರ)	

ಇ) ವಿವರಗಳು ಈ ಕೆಳಕಂಡಂತಿವೆ.

ವರ್ಷ	ಹೆಚ್ಚುವರಿ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದು	ಹಂಚಲಾಗಿದ್ದು
೧೯೮೫-೮೬	ಇಲ್ಲ	ಇಲ್ಲ
೧೯೮೬-೮೭	ಇಲ್ಲ	ಇಲ್ಲ
೧೯೮೭-೮೮	೧೪೦ ಎಕರೆ	೩೭ ಎಕರೆ

ಈ) ಇಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಕಳೆದ ಮೂರು ವರ್ಷಗಳಲ್ಲಿ ಯಾದಗಿರಿ ತಾಲ್ಲೂಕು ಭೂನ್ಯಾಯ ಮಂಡಲಿಯಲ್ಲಿ ಇತ್ಯರ್ಥವಾದ ಪ್ರಕರಣಗಳೆಷ್ಟು ಎಂದು ಕೇಳಿರುವ ಪ್ರಶ್ನೆಗೆ, ಸೆಕ್ಷನ್ ೩೮ ಹಾಗೂ ೪೮ರ ಅಡಿಯಲ್ಲಿ ಮೂರು ವರ್ಷಗಳಲ್ಲಿ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ ಎಂದರೆ ಒಂದೂ ಪ್ರಕರಣ ಇತ್ಯರ್ಥ ಆಗಿಲ್ಲ ಎಂದು ಅರ್ಥ ಕಲ್ಪಿಸಿರಿ ಅಡಿಯಲ್ಲಿ ಕ್ರಮವಾಗಿ ೧೮ ೬೫ ಹಾಗೂ ೧೦ ಎಂದು ಹೇಳಿದ್ದಾರೆ. ಮತ್ತೆ ಗೇಣಿದಾರರ ಪರ ಹಾಗೂ ವಿರುದ್ಧ ತೀರ್ಮಾನವಾದ ಪ್ರಕರಣಗಳ ಬಗ್ಗೆ ಕೇಳಿದ್ದಕ್ಕೆ ಕ್ರಮವಾಗಿ ೬೪, ೧೯, ೧೦ ಹಾಗೂ ೩೦, ೧೫, ೫ ಎಂದೂ ಹೇಳಿದ್ದಾರೆ. ಮತ್ತೆ ''ಈ'' ಪ್ರಶ್ನೆಯಲ್ಲಿ ನಿಮ್ಮ ಗಮನಕ್ಕೆ ದೂರುಗಳೇನಾದರೂ ಬಂದಿವೆಯೇ ಎನ್ನುವ ಪ್ರಶ್ನೆಗೆ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. ಎಷ್ಟೋ ಜನ ನಿಜವಾದ ಗೇಣಿದಾರರು ಅನ್ಯಾಯವಾಗಿದೆ ಎಂದೂ ಹೇಳಿ ಡೆಪ್ಯುಟಿ ಕಮಿಷನರ್‌ರಿಗೆ ಅಪೀಲ್ ಹಾಕಿದ್ದಾರೆ, ಅದೂ ಅಲ್ಲದೆ ಇದರಲ್ಲಿ ನಾವು ಕೂಡಾ ನೇರವಾಗಿ ಇಂಟರ್‌ಫಿಯರ್ ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ಕಂಪ್ಲೇಂಟ್ ಕೊಟ್ಟಿದ್ದು ಇಂತಹ ಕೇಸ್‌ಗಳನ್ನು ರಿವ್ಯೂ ಮಾಡಬೇಕೆಂದೂ ಹಿಂದೆ ಅವರಿಗೆ ಆದೇಶ ಇತ್ತು. ನೇರವಾಗಿ ಇಂಟರ್‌ಫಿಯರ್ ಆಗಿ ಎಷ್ಟು ಕೇಸ್ ಇತ್ಯರ್ಥವಾಗಿವೆ ಎಂಬುದನ್ನು ರಿವ್ಯೂ ಮಾಡಬೇಕೆಂದು ಆದೇಶ ಇತ್ತು. ಅದರ ಪ್ರಕಾರ ಸ್ಯಾಂಪಲ್ ರಿವ್ಯೂ ಮಾಡಿ ಸಂಬಂಧಪಟ್ಟ ಲ್ಯಾಂಡ್ ಟ್ರಿಬ್ಯೂನಲ್ ಛೇರ್ಮನ್ ಅಸಿಸ್ಟೆಂಟ್ ಕಮಿಷನರ್ ರವರಿಗೆ ಪುಲ್ ಅಪ್ ಮಾಡಿಕೊಟ್ಟಿದ್ದರು. ಆದರೆ ಇವತ್ತು ಅದನ್ನು ಕೇಳುತ್ತಿಲ್ಲ, ಪರಿಶೀಲಿಸುತ್ತಿಲ್ಲ, ಪರಿಶೀಲಿಸಿ ರಿವ್ಯೂ ಸಹ ಮಾಡುವುದಿಲ್ಲ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಕರ್ನಾಟಕದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಆಗಾಗ ರಿವ್ಯೂ ಮಾಡಿ ರಿಪೋರ್ಟ್ ಕೊಡಬೇಕೆಂದು ಆಜ್ಞೆ ಇದ್ದರೂ ಸರಿಯಾಗಿ ಇದನ್ನು ಅನುಸರಿಸುತ್ತಿಲ್ಲ. ಸಂಬಂಧಪಟ್ಟ ಜಿಲ್ಲೆಯ ಇನ್‌ಛಾರ್ಜ್ ಮಂತ್ರಿಗಳು ಇದನ್ನೆಲ್ಲಾ ನೋಡಬೇಕು. ಹೋದಸಲ ಕಾಂತಾರವರು ಮೀಟಿಂಗ್ ಕರೆದಿದ್ದರು. ಕಾರಣಾಂತರದಿಂದ ಡೆವಲಪ್‌ಮೆಂಟ್ ಮೀಟಿಂಗ್ ಮಾಡಿ ಅಡ್ಜರ್ನ್ ಮಾಡಿದರು ಎಂದು ಕೇಳಿದೆ. ಇಂತಹ ಅನ್ಯಾಯಗಳು ಬೇರೆ ಜಿಲ್ಲೆಗಳಲ್ಲೂ ಆಗದ ಹಾಗೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ? ಇಂತಹ ಟೆನೆನ್ಸಿ ಕೇಸ್ ರಾಜ್ಯದಲ್ಲಿ ಬೇರೆ ಕಡೆ ಎಷ್ಟು ಬಾಕಿ ಇವೆ ಎಂಬುದನ್ನು ಹೇಳಬೇಕು ಇನ್ನು ಲಿಫ್ಟ್ ಇರಿಗೇಷನ್ ಕೆಳಗೆ ಅನೇಕ ಜನ ಜಮೀನುದಾರರ ಭೂಮಿ ಇದ್ದರೂ ಅವರು ನೀರು ತೆಗೆದುಕೊಳ್ಳುವುದಿಲ್ಲ. ನೀರು ತೆಗೆದುಕೊಂಡರೆ ಸೀಲಿಂಗ್ ಒಳಗೆ ಬರುತ್ತೇವೆಂದು ಟಜ್ ಮಾಡುವುದಿಲ್ಲ ಊರ ಆಕ್ಕಪಕ್ಕದಲ್ಲಿ ದೊಡ್ಡ ದೊಡ್ಡ ಜಮೀನ್ದಾರರ ಭೂಮಿ ಸಹ ಇದೆ. ನೀರು ತೆಗೆದುಕೊಂಡರೆ ಸೀಲಿಂಗ್ ಲಿಮಿಟ್‌ಗೆ ಬರುತ್ತೇವೆಂದು ನೀರು ತೆಗೆದುಕೊಳ್ಳುವುದಿಲ್ಲ ಇದರಿಂದಾಗಿ ಮುಂದಕ್ಕೆ ಇರುವವರಿಗೂ ನೀರು ಸಿಕ್ಕುವುದಿಲ್ಲ. ಒಂದೂ ಕಡೆ ಸೀಲಿಂಗ್ ತಪ್ಪಿಸಿಕ

ಹಾಗೆ ಆಯಿತು ಎಂದು ಡಿಲೇ ಮಾಡುತ್ತಾರೆ. ಕೋರ್ಟ್‌ಆಂತರ ರೂಪಾಯಿ ಖರ್ಚು ಮಾಡಿ ಲಿಫ್ಟ್ ಇರಿಗೇಷನ್ ಮಾಡಿದ್ದೇವೆ. ನನ್ನ ತಾಲ್ಲೂಕಿನಲ್ಲೇ ನಾಲ್ಕೈದು ಇದೆ. ಚೇಳಗಿರ್ತಾಲ್ಲೂಕಿನಲ್ಲಿದೆ. ಅಫ್ಜಲ್‌ಪುರದಲ್ಲಿದೆ ಆದ್ದರಿಂದ ಈ ಸೀಲಿಂಗ್‌ನಲ್ಲಿ ಬರಬಾರದು ಎಂದು ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದಾರೆ, ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇರತಕ್ಕ ಲ್ಯಾಂಡನ್ನು ನ್ಯಾಷನಲೈಸ್ ಮಾಡಿ ಅವರಿಗೆ ಕಾಂಪನ್‌ಸೇಷನ್ ಕೊಟ್ಟು ಬಡವರಿಗೆ ಹಂಚಿದರೆ ಪ್ರಯೋಜನವಾಗುತ್ತದೆ. ಇಂಥ ಕೇಸ್‌ಗಳನ್ನು ರಿವ್ಯೂ ಮಾಡುತ್ತೀರಾ ? ಅದನ್ನಾದರೂ ದಯವಿಟ್ಟು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ರಿವ್ಯೂ ಮಾಡುವ ಬಗ್ಗೆ ಮೊದಲು ಆಜ್ಞೆ ಇತ್ತು. ಅದರ ಪ್ರಕಾರ ಮಾಡುತ್ತಿದ್ದಾರೆ. ಈಗಲೂ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಇಲ್ಲವಲ್ಲ ಯಾರು ಮಾಡುತ್ತಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಡೆಪ್ಯೂಟಿ ಕಮಿಷನರ್ ಮಾಡುತ್ತಿದ್ದಾರೆ. ಡೆಪ್ಯೂಟಿ ಕಮಿಷನರ್‌ಗೆ ಈಗ ಕೆಲಸ ಕಡಿಮೆ ಇದೆ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಅವರಿಗೆ ಏನೂ ಇಲ್ಲ. ಅವರಿಗೆ ಟೈಮ್ ಸಾಕಷ್ಟಿದೆ. ಡಿವಿಷನಲ್ ಕಮಿಷನರ್ ಲೆವೆಲ್‌ನಲ್ಲಿ ರಿವ್ಯೂ ಮಾಡುತ್ತಿದ್ದಾರೆ. ರಾಜ್ಯ ಮಟ್ಟದಲ್ಲಿ ಪ್ರತಿ ತಿಂಗಳೂ ರಿವ್ಯೂ ಮಾಡಿ ಮಾನಿಟರಿಂಗ್ ಮಾಡುತ್ತಿದ್ದೇವೆ. ಅಲ್ಲದೆ ರಿವಿನ್ಯೂ ಕಮೀಷನರ್ ಸ್ಪೆಷಲ್ ಮಾನಿಟರಿಂಗ್ ಮಾಡುತ್ತಿದ್ದಾರೆ. ಯಾವ ಯಾವ ಟ್ರಿಬ್ಯುನಲ್‌ನಲ್ಲಿ ತಡವಾಗಿದೆ ಕಾರಣ ಏನು ಎಂದು ನೋಡುತ್ತಿದ್ದಾರೆ. ಜಡ್ಜ್‌ಮೆಂಟ್ ಕೂಡ ತರಿಸಿಕೊಂಡು ನೋಡತಕ್ಕ ವ್ಯವಸ್ಥೆ ಇದೆ. ಸ್ಯಾಂಪಲ್ ಎಂದು ೧೦ ಪರ್ಸೆಂಟ್‌ನಷ್ಟು ಜಡ್ಜ್‌ಮೆಂಟನ್ನು ತರಿಸಿ ಟೆನೆಂಟ್ ವಿರಂದ್ದ ಆಗಿರುವುದು ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ಒಂದು ವೇಳೆ ಸರಿಯಾಗಿ ತೀರ್ಮಾನ ಆಗಿರದಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಇರಿಗೇಷನ್ ಬಗ್ಗೆ ಕೇಳಿದ್ದೀರಿ. ಯಾರು ತಪ್ಪು ಮಾಡುತ್ತಾರೋ ಅವರ ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ೫೦ ಎಕರೆ ಒಣ ಬೇಸಾಯ ಮಾಡುವುದಕ್ಕಿಂತ ೧೦ ಎಕರೆ ನೀರಾವರಿ ಇರುವ ಕಡೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಕೃಷ್ಣಾ ರಿವರ್ ಭಾಗದಲ್ಲಿ ಫರ್ಟೈಲ್ ಲ್ಯಾಂಡ್ ಇರುತ್ತದೆ. ಅಲ್ಲಿ ನಮ್ಮ ಭೂಮಿ ಸವಳಾಗುತ್ತದೆ ಎಂಬ ಭಾವನೆ ಅವರಿಗೆ ಇದೆ. ಏರಡನೆಯದು ಸೀಲಿಂಗ್ ಲಿಮಿಟ್‌ನಲ್ಲಿ ಹೋಗುತ್ತದಲ್ಲ ಎಂಬ ಭಾವನೆ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರೇ ಹಣ ಕೊಟ್ಟು ಲಿಫ್ಟ್ ಇರಿಗೇಷನ್ ಮಾಡಿಕೊಳ್ಳುವುದಕ್ಕೆ ಕೆಲವು ರೈತರು ಮುಂದೆ ಬಂದಿದ್ದಾರೆ.

ರಾಜ್ಯದಲ್ಲಿರುವ ದೇವದಾಸಿಯರ ಬಗ್ಗೆ

೧೨೦೬. **ಶ್ರೀ ಆರ್. ಎಸ್. ನಾಯ್ಕ (ಭಟ್ಕಳ).**—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ದೇವದಾಸಿಯರ ಸಂಖ್ಯೆ ಎಷ್ಟು? (ತಾಲ್ಲೂಕುವಾರು, ಜಿಲ್ಲಾವಾರು ವಿವರ ನೀಡುವುದು)

ಆ) ೧೯೮೫ ರಿಂದ ಈವರೆವಿಗೆ ಗೌರವ ಜೀವನ ನಡೆಸಲು ಅನುಕೂಲ ಮಾಡಿಕೊಡಲಾಗಿರುವ ದೇವದಾಸಿಯರ ಸಂಖ್ಯೆ ಎಷ್ಟು ?

ಇ) ದೇವದಾಸಿಯರಿಗೆ ವಸತಿ ನಿಲಯಗಳನ್ನು ಸ್ಥಾಪಿಸಿರುವ ಸ್ಥಳಗಳಾವುವು ? ಅವುಗಳ ಸಂಖ್ಯೆ ಎಷ್ಟು ?

ಈ) ಕಳೆದ ಮೂರು ವರ್ಷಗಳಲ್ಲಿ ದೇವದಾಸಿಯರ ಪುನರುದ್ಧಾರಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?